ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಇದು ಏನಾಗುತ್ತದೆಂದರೆ, ಕಡಿಮೆ ದರದಲ್ಲಿ ಇಂತಹ ಪೆಟ್ರೋಲ್ ಸಿಗುತ್ತದೆಂದು ತೆಗೆದುಕೊಂಡು ಮಾರಾಟ ಮಾಡುವ ದಂದೆಗೆ ಇಳಿಯುತ್ತಾರೆ. ಆದ್ದರಿಂದ ಜನ ಎಚ್ಚರಿಕೆಯಿಂದ ಈ ರೀತಿ ಮಾರಾಟ ಮಾಡುವುದರ ಬಗ್ಗೆ ತಿಳಿಸಿದರೆ ಮತ್ತು ಈ ರೀತಿ ಡೂಪ್ಲಿಕೇಟ್ ಪೆಟ್ರೋಲ್ ಇಂತಹ ಕಡೆ ಸಿಗುತ್ತದೆಂದು ಸರ್ಕಾರದ ಗಮನಕ್ಕೆ ತಂದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ, ಎಲ್ಲೆಲ್ಲಿ ಮಾರಾಟ ಮಾಡುತ್ತಾರೆ ಅವರ ಮೇಲೆ ಕೂಡ ಕಾನೂನು ಕ್ರಮ ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಸದನವನ್ನು ಈಗ ಸೋಮವಾರ ಬೆಳಿಗ್ಗೆ 11 ಘಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ದಿನಾಂಕ: 21–7–2005 ರ ಸಾಯಂಕಾಲ 5 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 25–7–2005 ರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

ಅನುಬಂಧ – I

5097 (5625) ಶ್ರೀ ಆಂಜನೇಯ. ಹೆಚ್. (ಭರಮಸಾಗರ) :ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ದಾವಣಗೆರೆ ನಗರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆ ಮಾಡಿರುವ ನಿವೇಶನ ಎಷ್ಟು ಮತ್ತು ಹಂಚಿಕೆ ಮಾಡಿರುವ ಮನೆಗಳು ಎಷ್ಟು?

ಆ) ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ನೀಡಬೇಕಾದ ಮೀಸಲಾತಿಯನ್ವಯ ಹಂಚಿಕೆಯಾಗಿದೆಯೇ?

ಇ) ಹಾಗಿದ್ದಲ್ಲಿ ಯಾವ ಯಾವ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಹಂಚಲಾಗಿದೆ? (ಹೆಸರು, ವಿಳಾಸ, ಜಾತಿಗಳ ವಿವರವಾದ ಪಟ್ಟಿ ಒದಗಿಸುವುದು)

ಈ) ಹಂಚಿಕೆಯಲ್ಲಿ ಭಾರಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಅಂಜನಮೂರ್ತಿ (ಮಾನ್ಯ ವಸತಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ದಾವಣಗೆರೆ ನಗರಕ್ಕೆ ಈ ಕೆಳಕಂಡಂತೆ ಮನೆಗಳನ್ನು ಮತ್ತು ನಿವೇಶನಗಳನ್ನು ನೀಡಲಾಗಿದೆ.

ನಗರ ಆಶ್ರಯ :–

ವರ್ಷ	ಗುರಿ	ಪೂರ್ಣಗೊಂಡ ಮನೆಗಳು
2002–03	113	1481
2003–04	0	602
2004–05	0	188
ಒಟ್ಟು	**113**	**2271**

ವಿಶೇಷ ಉದ್ಯೋಗ ಗುಂಪಿನ ಯೋಜನೆ :-

ವರ್ಷ	ಗುರಿ	ಪೂರ್ಣಗೊಂಡ ಮನೆಗಳು
2002-03	0	1470
2003-04	0	0
2004-05	0	0
ಒಟ್ಟು	**0**	**1470**

* ಹಿಂದಿನ ಶ್ರೇಣಿಯ ಅಡಿ ಪೂರ್ಣಗೊಳಿಸಿದ ಮನೆಗಳು ಸೇರಿವೆ.

ನಗರ ವಸತಿ ನಿವೇಶನ ಯೋಜನೆ:

2002-03, 2003-04 ಮತ್ತು 2004-05ರಲ್ಲಿ ಯಾವುದೇ ನಿವೇಶನಗಳನ್ನು ಹಂಚಿರುವುದಿಲ್ಲ.

ಆ) ನಗರ ಆಶ್ರಯ ಮತ್ತು ನಗರ ನಿವೇಶನ ಯೋಜನೆಗಳಡಿಯಲ್ಲಿ ಸರ್ಕಾರದ ಆದೇಶದಂತೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ.50, ಪರಿಶಿಷ್ಟ ಜಾತಿಗೆ 40 ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಶೇ.10ರ ಅನುಪಾತವನ್ನು ಅನುಸರಿಸಬೇಕಾಗುತ್ತದೆ. ಆದರೆ, ನಗರ ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ, ಪರಿಸಿಷ್ಟ ಪಂಗಡದ ಫಲಾನುಭವಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ಮುಂದೆ ಬಾರದಿದ್ದಲ್ಲಿ, ಆ ಗುರಿಯನ್ನು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡಲಾಗುತ್ತದೆ. ಏಕೆಂದರೆ, ನಗರ ಆಶ್ರಯ ಯೋಜನೆಯಡಿ ನೀಡುವ ಅನುದಾನವು ಪೂರ್ಣ ಪ್ರಮಾಣದಲ್ಲಿ ಸಾಲದ ರೂಪದಲ್ಲಿರುತ್ತದೆ.

ಇ) ಕಳೆದ ಮೂರು ವರ್ಷಗಳಲ್ಲಿ ದಾವಣಗೆರೆ ನಗರಕ್ಕೆ ಈ ಕೆಳಕಂಡಂತೆ ಗುರಿಯನ್ನು ನೀಡಲಾಗಿದ್ದು, ಆಯ್ಕೆ ಮಾಡಲಾಗಿರುವ ಫಲಾನುಭವಿಗಳ ವಿವರವನ್ನು ನೀಡಲಾಗಿದೆ.

ವರ್ಷ	ಗುರಿ	ಪ.ಜಾತಿ	ಪ.ಪಂ.	ಸಾಮಾನ್ಯ	ಒಟ್ಟು
2002-03	113	45	6	62	113
2003-04	0	0	0	0	0
2004-05	0	0	0	0	0
ಒಟ್ಟು	**113**	**45**	**6**	**62**	**113**

ಫಲಾನುಭವಿಗಳವಾರು ವಿವರ ಲಭ್ಯವಿರುವುದಿಲ್ಲ.

ಈ) ನಗರ ಆಶ್ರಯ ವಸತಿ ಯೋಜನೆಯಡಿ 1999-2000 ಮತ್ತು 2000-2001ರಲ್ಲಿ ಹಂಚಿಕೆಯಾಗಿರುವ ಮನೆಗಳಲ್ಲಿ ಅನಧಿಕೃತವಾಗಿ ಹಾಗೂ ಬಾಡಿಗೆ ರೂಪದಲ್ಲಿ ವಾಸಿಸುತ್ತಿರುವುದಾಗಿ ದಾವಣಗೆರೆ ನಗರಸಭೆಯ ಪೌರಾಯುಕ್ತರು ದಿನಂಕ: 2.12.2004ರ ಪತ್ರದಲ್ಲಿ ತಿಳಿಸಿದ್ದು, ಈ ಬಗ್ಗೆ ಎಲ್ಲಾ ಅನಧೀಕೃತ ಮತ್ತು ಬಾಡಿಗೆಗೆ ಇದ್ದವರ ಆಯ್ಕೆಯನ್ನು ರದ್ದುಗೊಳಿಸಿ ಅರ್ಹ ಫಲಾನುಭವಿಗಳಿಗೆ ಮರುಹಂಚಿಕೆ ಮಾಡಲಾಗಿದೆ ಎಂದು ದಾವಣಗೆರೆ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

5099 (6012) ಶ್ರೀ ಡಾ: ಅನ್ನದಾನಿ ಕೆ. (ಮಳವಳ್ಳಿ) : ಮಾನ್ಯ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದಿಸಲಾಗುತ್ತಿರುವ ಸಕ್ಕರೆ ಪ್ರಮಾಣ ಎಷ್ಟು; ಪ್ರತಿಯೊಂದು ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯದ ವಿವರಗಳೇನು; 2004-05 ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿನ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಪ್ರಮಾಣ ಎಷ್ಟು;